ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2086
2.	ಮಾನ್ಯ ಸದಸ್ಯರ ಹೆಸರು	ಶ್ರೀ ಆರ್. ಬಿ. ತಿಮ್ಮಾಪುರ (ವಿಧಾನಸಭೆಯಿಂದ ಚುನಾಯಿತರಾದವರು)
3.	ಉತ್ತರಿಸಬೇಕಾದ ದಿನಾಂಕ	30/03/2020
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಾರ್ಮಿಕ ಇಲಾಖೆಯಲ್ಲಿ ಮಂಜೂರಾದ ಒಟ್ಟು ಹುದ್ದೆಗಳೆಷ್ಟು; (ವೃಂದವಾರು ಮಾಹಿತಿ ಒದಗಿಸುವುದು)	ಕಾರ್ಮಿಕ ಇಲಾಖೆಯಲ್ಲಿ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ: 853+37* ವೃಂದಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಆ)	ಇಲಾಖೆಯಲ್ಲಿ ಕಳೆದ ಹಲವಾರು ವರ್ಷಗಳಿಂದ ಕಾರ್ಮಿಕ ನಿರೀಕ್ಷಕರ ಹುದ್ದೆಗಳ ಕೊರತೆಯಿಂದ ಕಾರ್ಮಿಕ ಕಾಯ್ದೆಗಳ ಹಾಗೂ ಕಲ್ಯಾಣ ಯೋಜನೆಗಳ ಅನುಷ್ಠಾನ ಕುಂಠಿತವಾಗಿದ್ದು, ಸಮರ್ಪಕವಾಗಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರವು ತೆಗೆದುಕೊಳ್ಳುವ ನಿಲುವೇನು;	ಖಾಲಿ ಇರುವ ಕಾರ್ಮಿಕ ನಿರೀಕ್ಷಕರ ಹುದ್ದೆಗಳಲ್ಲಿ ಇತರೆ ಕಾರ್ಮಿಕ ನಿರೀಕ್ಷಕರು ಅಧಿಕ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ನಿಯಮಾನುಸಾರ ಸರ್ಕಾರದ ಮೂಲಕ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಈಗಾಗಲೇ ಸಲ್ಲಿಸಲಾಗಿರುತ್ತದೆ. ಮುಂಬಡ್ತಿ ಮೂಲಕ ಭರ್ತಿ ಮಾಡಲು ಸಹ ಕ್ರಮವಹಿಸಲಾಗುತ್ತಿದೆ.
ಇ)	ಕಳೆದ 3 ವರ್ಷಗಳಲ್ಲಿ ಹಿರಿಯ ಕಾರ್ಮಿಕ ನಿರೀಕ್ಷಕರು/ ಕಾರ್ಮಿಕ ನಿರೀಕ್ಷಕರ ಹುದ್ದೆಗಳಲ್ಲಿ ನೇರ ನೇಮಕಾತಿಯಿಂದ ಹಾಗೂ ಮುಂಬಡ್ತಿಯಿಂದ ಭರ್ತಿ ಮಾಡಿರುವ ಹುದ್ದೆಗಳೆಷ್ಟು; ಭರ್ತಿ ಮಾಡದಿದಲ್ಲಿ ಅದಕ್ಕೆ ನಿರ್ದಿಷ್ಟ ಕಾರಣಗಳೇನು;	• ಕಳೆದ 3 ವರ್ಷಗಳಲ್ಲಿ ಮುಂಬಡ್ತಿಯಿಂದ ಭರ್ತಿ ಮಾಡಿರುವ ಹುದ್ದೆಗಳ ವಿವರ ಈ ಕೆಳಗಿನಂತಿರುತ್ತದೆ. 1) ಹಿರಿಯ ಕಾರ್ಮಿಕ ನಿರೀಕ್ಷಕರು–49 (ಕೆಸಿಎಸ್‌ಆರ್ ನಿಯಮ–32ರಡಿಯಲ್ಲಿ ಸ್ವತಂತ್ರ ಪ್ರಭಾರದಲ್ಲಿ ಇರಿಸಲಾಗಿರುವ 23 ಹುದ್ದೆಗಳು ಸೇರಿದಂತೆ) 2) ಕಾರ್ಮಿಕ ನಿರೀಕ್ಷಕರು –04 • ಕಳೆದ 3 ವರ್ಷಗಳಲ್ಲಿ ನೇರ ನೇಮಕಾತಿಯಿಂದ ಕಾರ್ಮಿಕ ನಿರೀಕ್ಷರ ಹುದ್ದೆಯನ್ನು ಭರ್ತಿ ಮಾಡಿರುವುದಿಲ್ಲ. ಖಾಲಿ ಇರುವ ಕಾರ್ಮಿಕ ನಿರೀಕ್ಷಕರುಗಳ ಹುದ್ದೆಗಳನ್ನು ನೇರ ನೇಮಕಾತಿ ಕೋಟಾದಡಿ ಭರ್ತಿಗೊಳಿಸಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.
ಈ)	ಖಾಲಿ ಇರುವ ಈ ಹುದ್ದೆಗಳನ್ನು ಭರ್ತಿ ಮಾಡುವುದು ಯಾವಾಗ?	ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮತ್ತು ಮುಂಬಡ್ತಿ ಮೂಲಕ ಕಾಲ ಕಾಲಕ್ಕೆ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.

ಇ–ಆಫೀಸ್ ಕಾಇ 172 ಎಲ್‌ಇಟಿ 2020

(ಅರಬೈಲ್ ಶಿವರಾಂ ಹೆಬ್ಬಾರ್)
ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಅನುಬಂಧ

ಕಾರ್ಮಿಕ ಇಲಾಖೆಯಲ್ಲಿ ಮಂಜೂರಾದ ಒಟ್ಟು ಹುದ್ದೆಗಳ ವೃಂದವಾರು ಮಾಹಿತಿ

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ
1	2	3
	ಗುಂಪು–'ಎ'	
1.	ಕಾರ್ಮಿಕ ಆಯುಕ್ತರು	01
2.	ಅಪರ ಕಾರ್ಮಿಕ ಆಯುಕ್ತರು	02
3.	ಜಂಟಿ ಕಾರ್ಮಿಕ ಆಯುಕ್ತರು	01+03**
4.	ಉಪ ಕಾರ್ಮಿಕ ಆಯುಕ್ತರು	06+04**
5.	ಸಹಾಯಕ ಕಾರ್ಮಿಕ ಆಯುಕ್ತರು	12+07**
6.	ಪತ್ರಾಂಕಿತ ವ್ಯವಸ್ಥಾಪಕರು	01
	ಒಟ್ಟು	23+14**
	ಗುಂಪು –'ಬಿ'	
7.	ವ್ಯವಸ್ಥಾಪಕರು	03
8.	ಕಾರ್ಮಿಕ ಅಧಿಕಾರಿ	42+9**
9.	ಜ್ಯೂನಿಯರ್ ಪ್ರೋಗ್ರಾಮರ್	01
	ಒಟ್ಟು	46+09**
	ಗುಂಪು –'ಸಿ'	
10.	ಅಧೀಕ್ಷಕರು	07
11.	ಹಿರಿಯ ಕಾರ್ಮಿಕ ನಿರೀಕ್ಷಕರು	83+07**
12.	ಕಾರ್ಮಿಕ ನಿರೀಕ್ಷಕರು	164
13.	ಸಹಾಯಕ ಸಾಂಖ್ಯಿಕ ಅಧಿಕಾರಿ	02
14.	ಉಪ ಸಂಪಾದಕರು	01
15.	ಪ್ರಥಮ ದರ್ಜೆ ಸಹಾಯಕರು	80+05**
16.	ದ್ವಿತೀಯ ದರ್ಜೆಸಹಾಯಕರು	84+02**
17.	ಶೀಘ್ರಲಿಪಿಗಾರರು	51
18.	ಡಾಟಾ ಎಂಟ್ರಿ ಆಪರೇಟರ್	02
19.	ಬೆರಳಚ್ಚುಗಾರರು	31
20.	ವಾಹನ ಚಾಲಕರು	14
	ಒಟ್ಟು	519+14**
	ಗುಂಪು –'ಡಿ'	
21.	ಅಕ್ಷರಸ್ಥ ಸಹಾಯಕರು	98
22.	ಸ್ಟೆನ್ಸಿಲ್ ಆಪರೇಟರ್	01
23.	ಜಮೇದಾರ್	01
24.	ಜವಾನರು	161
25.	ಕಸಗುಡಿಸುವವರು	01
26.	ಕಾವಲುಗಾರ	03
	ಒಟ್ಟು	265
	ಎಲ್ಲಾ ಸೇರಿ ಒಟ್ಟು	853+37**

** ಅನ್ಯಸೇವೆ ಮೇರೆಗೆ